# ಗಾಂಧಿನಗರ ಪೋಸ್ಟ್

## ಶಾರ್ಪ್ ಶೂಟರ್ ಮತ್ತು ಕಬಡ್ಡಿ!

ಕ್ರಿಸ್‌ಮಸ್ ಭರಾಟೆಯ ಡಿಸೆಂಬರ್ ತಿಂಗಳಲ್ಲಿ ಪೇಟೆಯಲ್ಲಿ ಕಾಣಿಸುವ ಇಳುವರಿ ಮತ್ತು ತೀರುವಳಿ ಮಾರಾಟಗಳ ಟ್ರೆಂಡ್ ಕನ್ನಡ ಚಿತ್ರರಂಗದಲ್ಲೂ ಶುರುವಾದಂತಿದೆ. ಕಳೆದ ವಾರವಷ್ಟೇ ದಿಗಂತ್ ಅಭಿನಯದ 'ಮಿಂಚಾಗಿ ನೀನು ಬರಲು' ತೆರೆ ಕಂಡಿದೆ. ಅದರ ಬೆನ್ನಿಗೆ 'ಶಾರ್ಪ್ ಶೂಟರ್' ಇದೋ ಬಂದೆ ಎನ್ನುತ್ತಿದೆ. ದಿಗಂತ್ ಅಭಿನಯದ ಮತ್ತೊಂದು ಸಿನಿಮಾ 'ಪರಪಂಚ' ಕೂಡ ಚಿತ್ರಮಂದಿರಗಳ ಹೊಸ್ತಿಲಲ್ಲಿದೆ.

ಸದ್ಯಕ್ಕೆ ಕ್ರಿಶ್ ಜೋಶಿ ನಿರ್ದೇಶನದ 'ಪರಪಂಚ' ಚಿತ್ರಕ್ಕೂ ಮುನ್ನ 'ಶಾರ್ಪ್ ಶೂಟರ್' ತೆರೆ ಕಾಣುತ್ತಿದೆ. ಗೀತ ರಚನೆಕಾರ ಗೌಸ್ ಪೀರ್ ಚೊಚ್ಚಿಲ ನಿರ್ದೇಶನದ ಈ ಸಿನಿಮಾದಲ್ಲಿ ದಿಗಂತ್‌ಗೆ ಜೋಡಿಯಾಗಿ ಸಂಗೀತಾ ನಟಿಸಿದ್ದಾರೆ. ಆದರೆ, ನಾಯಕಿಗಿಂತಲೂ ಹೆಚ್ಚು ಸುದ್ದಿಯಲ್ಲಿರುವುದು ವಿಶೇಷ ಹಾಡೊಂದರಲ್ಲಿ ಕುಣಿದಿರುವ ಐಂದ್ರಿತಾ ರೈ. 'ಕುಂಟೆಬಿಲ್ಲೆ ಆಡಿಕೊಂಡು ಇದ್ದೆ ನಾನು. ಕಬಡ್ಡಿ ಆಟ ಆಡೊ ಆಸೆ ತಂದೆ ನೀನು' ಎನ್ನುವ ಗೌಸ್‌ಪೀರ್ ರಚನೆಯ ಗೀತೆಯಲ್ಲಿ ದಿಗಂತ್–ಐಂದ್ರಿತಾ ಮೈಚಳಿ ಬಿಟ್ಟು ಕುಣಿದಿದ್ದಾರಂತೆ. ಈಚಿನ ದಿನಗಳಲ್ಲಿ ಗಾಂಧಿನಗರದ ಚಟುವಟಿಕೆಗಳಿಂದ ಹೆಚ್ಚೂ ಕಡಿಮೆ ಕಣ್ಮರೆಯಾಗಿದ್ದ ಈ ಜೋಡಿ, ಈಗ ವರ್ಷದ ಕೊನೆಯಲ್ಲಿ ಸುದ್ದಿ ಮಾಡುತ್ತಿದ್ದಾರೆ.

'ಶಾರ್ಪ್ ಶೂಟರ್' ದಿಗಂತ್ ಅವರ ಮೈಕಟ್ಟಿನ ಅನಾವರಣದ ಚಿತ್ರವೂ ಹೌದು. ಚಿತ್ರದಲ್ಲಿನ ವಿಶೇಷಗಳಲ್ಲಿ ನಾಯಕನ ಸಿಕ್ಸ್ ಪ್ಯಾಕ್ ಕಸರತ್ತೂ ಸೇರಿದೆಯಂತೆ. ಸ್ವಲ್ಪ ಲವ್, ಸ್ವಲ್ಪ ಫ್ರೆಂಡ್‌ಶಿಪ್, ಸ್ವಲ್ಪ ರೊಮಾನ್ಸ್ ಹಾಗೂ ಜಾಸ್ತಿ ತರಲೆ – ಎಲ್ಲವೂ ಹದವಾಗಿ ಮೇಳೈಸಿರುವ ಸಿನಿಮಾ ಎನ್ನುವ ನಿರ್ದೇಶಕರ ಬಣ್ಣನೆ ಕೂಡ 'ಶಾರ್ಪ್ ಶೂಟರ್' ಬಗ್ಗೆ ಕುತೂಹಲ ಉಂಟುಮಾಡಿದೆ. ಈ ಸಿನಿಮಾ ಗೆದ್ದಲ್ಲಿ ದಿಗಂತ್‌ರ ಮುಂದಿನ ಸಿನಿಮಾ 'ಪರಪಂಚ'ಕ್ಕೆ ಒಳ್ಳೆಯ ಆರಂಭ ದೊರೆಯಬಹುದು.



## ಪ್ರೀತಿಯೊಂದಿಗೆ ರತ್ನಜ

'ನೆನಪಿರಲಿ' ರತ್ನಜ ಅವರ ನಿರ್ದೇಶನದ ಹೊಸ ಸಿನಿಮಾ 'ಪ್ರೀತಿಯಲ್ಲಿ ಸಹಜ' ಸೆನ್ಸಾರ್ ಪ್ರಕ್ರಿಯೆ ಮುಗಿಸಿಕೊಂಡು ತೆರೆಕಾಣುವ ತವಕದಲ್ಲಿದೆ. ಆದರೆ, ಚಿತ್ರಮಂದಿರಗಳದ್ದೇ ಸಮಸ್ಯೆ! ಹಾಗಾಗಿ, ಚಿತ್ರದ ಬಿಡುಗಡೆ ದಿನಾಂಕ ಮುಂದಕ್ಕೆ ಹೋಗುತ್ತಲೇ ಇದೆ. ಈ ಸಮಯವನ್ನು ಪ್ರಚಾರಕ್ಕೆ ಬಳಸಿಕೊಳ್ಳಲು ನಿರ್ಮಾಪಕರು ಉದ್ದೇಶಿಸಿದ್ದು, ಒಂದು ಆಂದೋಲನದ ರೀತಿ ತಮ್ಮ ಚಿತ್ರದ ಪ್ರಚಾರ ಕೈಗೊಳ್ಳಲು ಪ್ರಯತ್ನಿಸುತ್ತಿದ್ದಾರೆ.

'ಪ್ರೇಮಿಸಂ' ನಂತರ ರತ್ನಜ ಅವರು ನಿರ್ದೇಶಿಸಿರುವ 'ಪ್ರೀತಿಯಲ್ಲಿ ಸಹಜ' ಮೂರು ತಲೆಮಾರುಗಳ ಕಥನ ಒಳಗೊಂಡಿದೆಯಂತೆ. ದೇವರಾಜ್ ಹಾಗೂ ಸುಹಾಸಿನಿ ಅವರೊಂದಿಗೆ ಸೂರ್ಯ (ಕಿರುತೆರೆಯ ಜನಪ್ರಿಯ ನಟ), ರಘು ಮುಖರ್ಜಿ ಅವರು ಪ್ರಮುಖ ಪಾತ್ರಗಳಲ್ಲಿ ನಟಿಸಿರುವ ಈ ಚಿತ್ರದಲ್ಲಿ ಅಕ್ಷಾ ಎನ್ನುವ ಕಾಶ್ಮೀರಿ ಚೆಲುವೆ ನಟಿಸಿದ್ದಾಳೆ.

'ಪ್ರೀತಿಯಲ್ಲಿ ಸಹಜ' ಚಿತ್ರಕ್ಕೆ ಅನಂತ್ ಅರಸ್ ಛಾಯಾಗ್ರಹಣ ಹಾಗೂ ರವಿರಾಜ್ ಸಂಗೀತ ಇದ್ದು, ಸಿನಿಮಾದ ಶೂಟಿಂಗ್ ಕರ್ನಾಟಕ, ಕೇರಳ, ತಮಿಳುನಾಡುಗಳಲ್ಲಿ ನಡೆದಿದೆ. ಮೂರು ಕಾಲಘಟ್ಟಗಳ ಈ ಸಿನಿಮಾದಲ್ಲಿ ಪರಿಸರವೂ ಪ್ರಮುಖ ಪಾತ್ರ ವಹಿಸುವುದರಿಂದ, ಒಂದರ್ಥದಲ್ಲಿ ದಕ್ಷಿಣ ಭಾರತ ಪ್ರದಕ್ಷಿಣೆ ಚಿತ್ರದಲ್ಲಿ ಸಾಧ್ಯವಾಗಿದೆ.

■ ರಘು

